ಕಲೆಯ ಮೂಲಕ ಸಾತ್ತ್ವಿಕತೆ ಪಡೆಯುವ ಬಗ್ಗೆ

ಮಾರ್ಗದರ್ಶಕ ಗ್ರಂಥಮಾಲಿಕೆ : ಮದರಂಗಿ - ಖಂಡ ೧

## ದೇವತಾತತ್ತ್ವಗಳ ಲಾಭ ದೊರಕಿಸಿ ಕೊಡುವ

# ಸಾತ್ತ್ವಿಕ ಮದರಂಗಿಗಳು

## (ಅಯೋಗ್ಯ ಮದರಂಗಿಗಳ ದುಷ್ಪರಿಣಾಮಗಳ ಸಹಿತ)

(Sattvik heena [As also harmful effects of non-sattvik heena])

ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಮದರಂಗಿಯ ವಿನ್ಯಾಸಗಳು**

**ಕು. ಸಂಧ್ಯಾ ಪುಂಡಲೀಕ ಮಾಳಿ**

**ಮದರಂಗಿಯ ವಿನ್ಯಾಸಗಳ ಗಣಕೀಯ ಸಾದರೀಕರಣ**

**ಸೌ. ಅಕ್ಷತಾ ರೂಪೇಶ ರೇಡ್ಕರ್**

**ಕು. ರೋಶ್ನಿ ಮಹೇಂದ್ರ ಕ್ಷತ್ರಿಯ**

**ಸೌ. ಜಾಹ್ನವಿ ರಮೇಶ ಶಿಂದೆ**



## ಸನಾತನ ಸಂಸ್ಥೆ


ಏಪ್ರಿಲ್ ೨೦೨೩ ರವರೆಗೆ ಸನಾತನದ ೩೬೦ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೩,೩೯,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಏ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಕು. ಭಾವಿನಿ ಕಪಾಡಿಯಾ
ಶ್ರೀ. ರವೀಂದ್ರ ಸುರೇಶ ಪೇಡಣೆಕರ

**First Edition** : Srimata Sharadadevi Jayanthi
Kaliyug Varsh 5116 (13th December 2014)

**First Edition Second Reprint** : Vatasavitri Vrata, Kaliyug Varsh 5125
(3rd June 2023)

Translated from the original Marathi text 'Sattvik mendi (Ayogya mendichya dushparinamansaha)'

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್
ಡಾ. ಪ್ರಕಾಶ ಘಾಳಿ

**ರಚನಾಕಾರರು** : ಕು. ಬಾಂಧವ್ಯ ಶ್ರೀನಾಥ ಶ್ರೇಷ್ಠಿ

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 105/-

**ISBN** : 978-93-84460-03-7

ॐ ಗ್ರಂಥ ಕ್ರ. : 201

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ವಿಷಯಸೂಚಿ

೧. ಗ್ರಂಥದ ಸಂಕಲನಕಾರರ ಪರಿಚಯ ೬

೨. ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೮

೩. ಮನೋಗತ ೧೧

卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೧೨

---

## ಗ್ರಂಥದ ಅನುಕ್ರಮಣಿಕೆ

(ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)

೧. ‘ಮದರಂಗಿ’ (ಮೇಂದಿ) ಶಬ್ದದ ಉತ್ಪತ್ತಿ ಮತ್ತು ಅರ್ಥ ೧೬

೨. ಮದರಂಗಿಯನ್ನು ಬಿಡಿಸುವ ಭಾರತದ ಇತಿಹಾಸ ೧೬

೩. ಧರ್ಮಶಾಸ್ತ್ರಕ್ಕನುಸಾರ ಪುರುಷರು ಕೈ-ಕಾಲುಗಳ ಮೇಲೆ ಮದರಂಗಿಯನ್ನು ಬಿಡಿಸುವುದು ಅಯೋಗ್ಯವಾಗಿದ್ದು ಕೇವಲ ಸ್ತ್ರೀಯರು ಮಾತ್ರ ಮದರಂಗಿಯನ್ನು ಬಿಡಿಸುವುದು ಯೋಗ್ಯವಾಗಿದೆ ೧೭

೪. ಮದರಂಗಿಯನ್ನು ಹಚ್ಚುವುದರ ಹಿಂದಿನ ಉದ್ದೇಶ ೨೦

೫. ಮದರಂಗಿ ಬಿಡಿಸುವುದರಿಂದಾಗುವ ವಿವಿಧ ಲಾಭಗಳು ೨೦

೬. ಮದರಂಗಿಯ ಬಣ್ಣ ೨೩

೭. ಕೈ-ಕಾಲುಗಳ ಮೇಲೆ ಮದರಂಗಿಯಿಂದ ವಿನ್ಯಾಸಗಳನ್ನು ಬಿಡಿಸುವ ವಿವಿಧ ಪದ್ಧತಿಗಳು ೨೬

೮. ಕೈ-ಕಾಲುಗಳ ಮೇಲೆ ಮದರಂಗಿಯಿಂದ ವಿನ್ಯಾಸಗಳನ್ನು ಬಿಡಿಸುವ ಮೊದಲು ಮಾಡಬೇಕಾದ ತಯಾರಿ ೩೧

೯. ಮದರಂಗಿಯಿಂದ ವಿನ್ಯಾಸಗಳನ್ನು ಬಿಡಿಸುವುದು ೩೪

೧೦. ಮದರಂಗಿಯನ್ನು ಬಿಡಿಸಿದ ನಂತರ ಮಾಡಬೇಕಾದ ಕೃತಿಗಳು ೩೪

೧೧. ಕೈ-ಕಾಲುಗಳ ಮೇಲೆ ವಿನ್ಯಾಸಗಳನ್ನು ಬಿಡಿಸುವ ಮದರಂಗಿಯ ಹೊರತು ಇತರ ಪಾರಂಪರಿಕ ವಿಧಗಳು ೩೫

**೧೨. ಸದ್ಯ ಮದರಂಗಿ ಕಲೆಯಲ್ಲಿ ಸೇರಿಕೊಂಡಿರುವ ತಪ್ಪು ವಿಧಗಳು** **೩೭**

**೧೩. ಮದರಂಗಿಯ ವಿನ್ಯಾಸಗಳು** **೪೨**

೧೩ ಆ. ಮದರಂಗಿಯ ಅಸಾತ್ತ್ವಿಕ ಮತ್ತು ಸಾತ್ತ್ವಿಕ ವಿನ್ಯಾಸಗಳಿಂದ ಸಂಬಂಧಿತ ವ್ಯಕ್ತಿಯ ಮೇಲಾಗುವ ಪರಿಣಾಮಗಳು, ಹಾಗೆಯೇ ಇತರ ಪರಿಣಾಮಗಳು ೪೪

**೧೪. ಮದರಂಗಿಯ ಸಾತ್ತ್ವಿಕ ವಿನ್ಯಾಸಗಳ ನಿರ್ಮಿತಿಯ ಸೇವೆಯನ್ನು ಮಾಡುವಾಗ ಸಾಧಕಿಯರಿಗೆ ಕಲಿಯಲು ಸಿಕ್ಕಿದ ಅಂಶಗಳು ಮತ್ತು ಬಂದಿರುವ ಅನುಭೂತಿಗಳು** **೫೭**

**೧೫. ವಿವಿಧ ಸಾತ್ತ್ವಿಕ ವಿನ್ಯಾಸಗಳು** **೭೩**

## ಪರಾತ್ಪರ ಗುರು ಡಾ. ಜಯಂತ ಆಠವಲೆಯವರ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು 'ಸಚ್ಚಿದಾನಂದ ಪರಬ್ರಹ್ಮ' ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು 'ಪ.ಪೂ. [ಪರಮ ಪೂಜ್ಯ]' ಮತ್ತು 'ಪರಾತ್ಪರ ಗುರು' ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.

---

## ಸನಾತನದ ಇಬ್ಬರೂ ಸದ್ಗುರುಗಳ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಬಿಂದಾ ನೀಲೇಶ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ನೀಲೇಶ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಮುಕುಲ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ' ಎಂದು ಸಂಬೋಧಿಸಲಾಗುತ್ತಿದೆ. ಈ ಇಬ್ಬರೂ ಸಂತರು ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾಗಿದ್ದಾರೆ.

# ವಿಷಯಸೂಚಿಯಲ್ಲಿನ ಕ್ರಮಾಂಕ ೩

## ಮನೋಗತ

ಹಬ್ಬ-ಸಮಾರಂಭಗಳ ಪ್ರಸಂಗಗಳಲ್ಲಿ ಅಥವಾ ಬಿಡುವಿನ ಸಮಯದಲ್ಲಿ ಹುಡುಗಿಯರು ಹಾಗೂ ಸ್ತ್ರೀಯರು ಮದರಂಗಿಯನ್ನು ಬಿಡಿಸಲು ಕುಳಿತುಕೊಳ್ಳುತ್ತಾರೆ. ಮದರಂಗಿಯ ಸಿದ್ಧ (ರೆಡಿ) ಕೋನುಗಳನ್ನು ತಂದು, ಪುಸ್ತಕದಿಂದ ಅಥವಾ ಪೂರ್ವಾನುಭವದಿಂದ ಪರಸ್ಪರರ ಕೈ-ಕಾಲುಗಳ ಮೇಲೆ ಮದರಂಗಿಯನ್ನು ಬಿಡಿಸುತ್ತಾರೆ. ಇತ್ತೀಚೆಗೆ ಮದುವೆ ಸಮಾರಂಭದ ಸಮಯದಲ್ಲಿ ಮದರಂಗಿ ಬಿಡಿಸುವ ವೃತ್ತಿಪರರನ್ನು ಕರೆದು ಮದರಂಗಿಯನ್ನು ಬಿಡಿಸಿಕೊಳ್ಳುತ್ತಾರೆ. ಈ ಎಲ್ಲ ಪ್ರಸಂಗಗಳಲ್ಲಿ ಮದರಂಗಿಯನ್ನು ಕೇವಲ ಒಂದು ಮನರಂಜನೆಯ ಸಾಧನ ಅಥವಾ ಉಪಚಾರವೆಂದು ನೋಡಲಾಗುತ್ತದೆ. ವೃತ್ತಿಪರರು ಅದನ್ನು ಒಂದು 'ಹಣ ಸಂಪಾದಿಸುವ ಸಾಧನ'ವೆಂದು ನೋಡುತ್ತಾರೆ; ಆದರೆ ಮದರಂಗಿಗೆ ಇವೆಲ್ಲಕ್ಕಿಂತ ಹೆಚ್ಚಿನ ಮಹತ್ವವಿದೆ. ಸಾವಿರಾರು ವರ್ಷಗಳಿಂದ ಹಿಂದೂ ಸಂಸ್ಕೃತಿಯ ಅವಿಭಾಜ್ಯ ಘಟಕವಾಗಿರುವ ಮದರಂಗಿಯು ವಾತಾವರಣದಲ್ಲಿನ ದೇವತೆಗಳ, ಹಾಗೆಯೇ ಇತರ ಸಾತ್ತ್ವಿಕ ಸ್ಪಂದನಗಳನ್ನು ಆಕರ್ಷಿಸಿ ಸ್ತ್ರೀಯರಿಗೆ ಅದರ ಲಾಭವನ್ನು ದೊರಕಿಸಿಕೊಡುತ್ತಾ ಬಂದಿದೆ. ಇದರ ಬಗೆಗಿನ ಮಾಹಿತಿ, ಹಾಗೆಯೇ ಮದರಂಗಿಯನ್ನು ಬಿಡಿಸುವ ಯೋಗ್ಯ-ಅಯೋಗ್ಯ ಪದ್ಧತಿಗಳು, ಪ್ರಸ್ತುತ ಕಾಲದಲ್ಲಿ ಮದರಂಗಿ ಕಲೆಯಲ್ಲಿ ಸೇರಿಕೊಂಡಿರುವ ತಪ್ಪು ಪ್ರಕಾರಗಳು ಮುಂತಾದವುಗಳ ಬಗೆಗಿನ ವಿವರಣೆಯನ್ನು ಈ ಗ್ರಂಥದಲ್ಲಿ ಕೊಡಲಾಗಿದೆ.

ಸಾಮಾನ್ಯವಾಗಿ ಮದರಂಗಿಯ ಪುಸ್ತಕಗಳಲ್ಲಿ ಕೊಟ್ಟಿರುವ ಹೆಚ್ಚಿನ ವಿನ್ಯಾಸಗಳು ಅಸಾತ್ತ್ವಿಕವಾಗಿರುತ್ತವೆ. ಅವುಗಳನ್ನು ಬಿಡಿಸುವುದರಿಂದ ತ್ರಾಸದಾಯಕ ಶಕ್ತಿಗಳಿಂದ ತೊಂದರೆಯಾಗುವ ಸಾಧ್ಯತೆಯಿರುತ್ತದೆ. ತದ್ವಿರುದ್ಧವಾಗಿ ದೇವತೆಗಳ ತತ್ತ್ವಗಳಿಗೆ ಸಂಬಂಧಿಸಿದ ವಿನ್ಯಾಸಗಳನ್ನು ಬಿಡಿಸುವುದರಿಂದ, ಅವುಗಳನ್ನು ಬಿಡಿಸುವ ವ್ಯಕ್ತಿ ಮತ್ತು ಬಿಡಿಸಿಕೊಳ್ಳುವ ಸ್ತ್ರೀ ಇವರಿಬ್ಬರ ಮೇಲೆಯೂ ಆಧ್ಯಾತ್ಮಿಕ ಉಪಾಯಗಳಾಗುತ್ತವೆ ಮತ್ತು ಅವರಿಗೆ ಆಧ್ಯಾತ್ಮಿಕ ತೊಂದರೆಯಾಗುತ್ತಿದ್ದರೆ, ಅದು ಕಡಿಮೆಯಾಗುತ್ತದೆ. ಆದುದರಿಂದ ಈ ಗ್ರಂಥದಲ್ಲಿ ವಿವಿಧ ದೇವತೆಗಳ ತತ್ತ್ವಗಳನ್ನು ಆಕರ್ಷಿಸಿಕೊಳ್ಳುವ ವಿನ್ಯಾಸಗಳನ್ನು ಕೊಡಲಾಗಿದೆ.

ಸಮಾಜದಲ್ಲಿನ ಮದರಂಗಿಗಳನ್ನು ಬಿಡಿಸುವ ವ್ಯಕ್ತಿಗಳು ಮತ್ತು ಬಿಡಿಸಿಕೊಳ್ಳುವ ಸ್ತ್ರೀಯರು, ಹಾಗೆಯೇ ಆ ವಿನ್ಯಾಸಗಳನ್ನು ನೋಡುವವರಿಗೆ ಈ ಗ್ರಂಥದಲ್ಲಿನ ಸಾತ್ತ್ವಿಕ ವಿನ್ಯಾಸಗಳಿಂದ ಆಧ್ಯಾತ್ಮಿಕ ಲಾಭವಾಗಬೇಕು ಮತ್ತು ಅವರಲ್ಲಿ ಸಾತ್ತ್ವಿಕತೆಯ ಸೆಳೆತ ನಿರ್ಮಾಣವಾಗಬೇಕೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**